


ಎಡದಿಂದ ಬಲಕ್ಕೆ:

1. ಅವನು ಸದಾ ಅನ್ಯಮನಸ್ಕನಾಗಿರುತ್ತಾನೆಂಬುದೇ ಎಲ್ಲರ ಸಂಶಯ 4
3. ಇತರರ ಅಭ್ಯುದಯ ಬಯಸುವಂಥ ಜನರ ಸಂಖ್ಯೆಯಲ್ಲಿ ಭಾರೀ ಕೊರತೆ 3
4. ತವರೂರನ್ನು ತೊರೆಯಬಾರದೆಂದು ತುಂಬ ಒತ್ತಾಯ 3
6. ಮತಿಗೆಟ್ಟವರಷ್ಟೇ ಮೆಚ್ಚುವಂಥ ಮಂತ್ರತಂತ್ರ ಬಲ್ಲ ಚೆಲುವೆ 4
7. ತಪ್ಪು ತೋರಿಸುವ ಮೊದಲು ವಿವರವಾಗಿ ಪರೀಕ್ಷಿಸು 4
9. ತಾಯಿ ಮತ್ತು ಮಗುವಿನ ಖರ್ಚಿನಲ್ಲೂ ಹಣ ಉಳಿಸುವುದೇ? 4
12. ಭೀಮನೆಂದೊಡನೆ ನೆನಪಾಗುವುದು ಅವನ ಆತ್ಮಗೌರವ 4
14. ಹಲೋ ಹೇಳುತ್ತಲೇ ಹಿಂದು ಮುಂದಾಗಿ ಕಂಡದ್ದು ಕೆಂಪು ಬಣ್ಣ 3
15. ಯಾವ ಕೆಲಸಕ್ಕೂ ತಕ್ಕದ್ದಲ್ಲ ಆ ಸಮಯ 3
16. ಕಳ್ಳರು ಬರುವ ವೇಳೆಗೆ ಕಾಣಿಸಿದ್ದು ಬರೀ ಶರೀರ 4

ಮೇಲಿಂದ ಕೆಳಕ್ಕೆ:

1. ಅವನ ವಿನಂತಿಯನ್ನು ಕಡೆಗಣಿಸಿದ್ದಕ್ಕೇ ಈ ಕೀಳುಗತಿ 4
2. ವಿನಯವಂತನಿಗೆ ಸಿಕ್ಕ ಬಹುಮಾನ ಬೆಣ್ಣೆ 4
3. ಅಪ್ಪ ತಂದಿಟ್ಟ ತೈಲ ಅತ್ಯಂತ ಪರಿಶುದ್ಧ 3
5. ತಪ್ಪುಗಳನ್ನು ದೂರ ಸರಿಸಿದವ ಒಬ್ಬ ಋಷಿ 3
6. ಮತ್ತೆ ಮತ್ತೆ ಆಕರ್ಷಿಸುತ್ತದೆ ತಾಯಿ ನೆಲ 4
8. ಬಸ್ಸು ಚಲಾಯಿಸುವವನ ಒಳ್ಳೆಯ ಕಣ್ಣೆಗೊಂದು ಸುಂದರ ಕನ್ನಡಕ 4
10. ಗುರುತು ಸಿಗಲೆಂದು ಸಂಗ್ರಹಿಸಿದ್ದ ಒಣ ವಸ್ತು ತಲೆಕೆಳಗು 3
11. ಭೂ ಸುತ್ತಲಿನ ಕಕ್ಷೆಯಲ್ಲಿಲ್ಲ ಬಿಡಿ, ಅದು ದೇವತಾ ಪ್ರಪಂಚ 4
12. ಆತುರವೋ ಆತುರ, ಹಾಗಾಗಿಯೇ ಇಂಥ ಗಡಿಬಿಡಿ, ಗೊಂದಲ 4
13. ಮುಂಜಾನೆಯೂ ಬಂದಿಲ್ಲ, ಆಗಲೇ ಹಾಜರಾಯಿತು ಬೆಕ್ಕು 3

---

### 21-05-2020 **ಉತ್ತರಗಳು**

ಎಡದಿಂದ ಬಲಕ್ಕೆ:

1. ಅನುಬಂಧ 3. ಭರಿಸು 4. ನಿರೂಪ 6. ರಸಪಾಕ 7. ಪಡುವಣ 8. ಮತಿಹೀನ 10. ನಟ್ಟಿರುಳು 12. ವನಸುಮ 14. ಬಡಿವಾರ 16. ಮುರಳಿ 17. ಮಧುರ 18. ಕಡಿವಾಣ

ಮೇಲಿಂದ ಕೆಳಕ್ಕೆ:

1. ಅಸುರ 2. ಧನಿಕ 3. ಭರವಸೆ 5. ಪದ್ಧತಿ 7. ಪಲಾಯನ 9. ನವ್ಯಕ್ರಮ 11. ರುಸುಮು 13. ಕನವರ 14. ಬಳಿಕ 15. ರಮಣ

**ಪ್ರಶ್ನಾ ಒಕಣ**

# ಒಲೆ ಹಕ್ಕಿ: ಏನು ವಿಶೇಷ?

ಒಲೆ ಹಕ್ಕಿ (Oven Bird) ಅತ್ಯಂತ ವಿಭಿನ್ನ. ವಿಚಿತ್ರ, ವಿಸ್ಮಯಕರ ಗೂಡನ್ನು ನಿರ್ಮಿಸುವುದೇ ಈ ಹಕ್ಕಿಯ ಪ್ರಥಮ ಮತ್ತು ಪರಮ ವಿಶೇಷ (ಚಿತ್ರ 2) ಜೇಡಿ ಮಣ್ಣನ್ನು ಬಳಸಿ, ಕಾಲ್ಚೆಂಡಿನ ಗಾತ್ರದ, ಅಂತಹದೇ ದುಂಡನೆಯ ಆಕಾರದ, 'ರೊಟ್ಟಿ ಸುಡುವ ಒಲೆ'ಯನ್ನೇ ಹೋಲುವ ಸ್ವರೂಪದ ಗೂಡನ್ನು ನಿರ್ಮಿಸುವ ಈ ಹಕ್ಕಿಗೆ ಹಾಗಾಗಿಯೇ ಒಲೆ ಹಕ್ಕಿ ಎಂಬ ಹೆಸರು. ಮಧ್ಯ ಅಮೆರಿಕ ಮತ್ತು ದಕ್ಷಿಣ ಅಮೆರಿಕದಲ್ಲಿ ನೆಲೆಸಿರುವ ಸಾದಾ ಬಣ್ಣದ, ಸಾಧಾರಣ ರೂಪದ, ಸಾಮಾನ್ಯ ಗಾತ್ರದ ಈ ಹಕ್ಕಿಗಳಲ್ಲಿ 236 ಪ್ರಭೇದಗಳಿವೆ. ಕೀಟಗಳು ಮತ್ತು ಬೀಜಗಳೇ ಈ ಹಕ್ಕಿಗಳ ಆಹಾರ.

ಒಲೆ ಹಕ್ಕಿಗಳ ವೈಶಿಷ್ಟ್ಯ ಇರುವುದೇ ಅವುಗಳ ಗೂಡಿನ ರಚನೆಯಲ್ಲಿ. ಗೂಡಿನ ನಿರ್ಮಾಣಕ್ಕೆ ಈ ಹಕ್ಕಿಗಳು ಬಳಸುವ ಸಾಮಗ್ರಿಗಳು, ಕೌಶಲ್ಯ, ತಂತ್ರಗಾರಿಕೆ, ಗೂಡಿನ ನಿರ್ಮಾಣಕ್ಕೆ ಅವು ಪಡುವ ಶ್ರಮ... ಪ್ರತಿಯೊಂದೂ ಇಡೀ ಖಗಲೋಕದಲ್ಲೇ ಅನನ್ಯ, ಅತ್ಯದ್ಭುತ.

ಒಲೆ ಹಕ್ಕಿಗಳು ತಮ್ಮ ಗೂಡನ್ನು ಸಾಮಾನ್ಯವಾಗಿ ನದಿ, ಸರೋವರಗಳ ದಂಡೆಗಳಲ್ಲಿ ನೀರಿನ ಮೇಲೆ ಚಾಚಿಕೊಂಡಿರುವ ಮಹಾ ವೃಕ್ಷಗಳ ಮಟ್ಟಸ ಕೊಂಬೆಗಳ ಮೇಲೆ ನಿರ್ಮಿಸುತ್ತವೆ. ನದೀ ತಟಗಳಲ್ಲಿ ಲಭಿಸುವ ಜೇಡಿ ಮಣ್ಣನ್ನು ತಂದು ತಂದು, ಕೊಕ್ಕಿನಿಂದಲೇ ಮೆತ್ತಿ ಮೆತ್ತಿ ಜೊತೆ ಜೊತೆಗೇ ಹುಲ್ಲು ಗರಿಗಳನ್ನೂ ಬೆರೆಸಿ, ಒಳಗೆಲ್ಲ ಟೊಳ್ಳಾದ ಆದರೆ ದಪ್ಪನ್ನ ಗೋಡೆಯ ಗೋಳಾಕೃತಿಯನ್ನು ನಿರ್ಮಿಸುತ್ತವೆ (ಚಿತ್ರ 1, 2 ನೋಡಿ). ಅದರ ಒಂದು ಪಾರ್ಶ್ವದಲ್ಲಿ ಒಂದು ಪ್ರವೇಶ ದ್ವಾರವನ್ನು ಇಟ್ಟು ಅಲ್ಲಿಂದ ಕಿರಿದಾದ, ಸುರುಳಿ ಆಕಾರದ ಉದ್ದನೆಯ ಸುರಂಗವನ್ನು ನಿರ್ಮಿಸಿ ಅದರ




ತುದಿಯಲ್ಲಿ ಬಟ್ಟಲಿನಾಕೃತಿಯೊಂದನ್ನು ರಚಿಸುತ್ತವೆ. ಮೊಟ್ಟೆಗಳನ್ನಿಟ್ಟು ಮರಿಮಾಡಲು ಬಳಸುವ ಈ ಬಟ್ಟಲ ತುಂಬ ನಾರು, ಕೂದಲು, ಪುಕ್ಕಗಳು ಮತ್ತು ಜೇಡನ ಬಲೆ ತುಣುಕುಗಳ ಮೆತ್ತೆಯನ್ನು ಹಾಸುತ್ತವೆ. ಒಂದೆರಡು ದಿನಗಳಲ್ಲೇ ಇಡೀ ಗೂಡು ಬಿಸಿಲಲ್ಲಿ ಒಣಗಿ ಕಲ್ಲಿನಂತೆ ಗಟ್ಟಿಯಾಗುತ್ತದೆ. ಮಳೆಯಲ್ಲಿ ಕರಗದ, ಬಿರುಗಾಳಿಗೂ ಜಗ್ಗದ, ಶತ್ರು ಪ್ರವೇಶ ಸುಲಭವಲ್ಲದ ಇಂಥ ಅದ್ಭುತ ಗೂಡಿನ ನಿರ್ಮಾಣಕ್ಕೆ ಈ ಹಕ್ಕಿಗಳು ಸರಾಸರಿ ಮೂರು ತಿಂಗಳುಗಳ ಕಾಲ ಶ್ರಮಿಸುತ್ತವೆ!

ವಿಪರ್ಯಾಸ ಏನೆಂದರೆ, ಅಷ್ಟೆಲ್ಲ ಕಾಲ ಇಷ್ಟೊಂದು ಶ್ರಮವಹಿಸಿ ನಿರ್ಮಿಸುವ ತಮ್ಮ ಗೂಡನ್ನು ಈ ಹಕ್ಕಿಗಳು ಮೊಟ್ಟೆ ಇಟ್ಟು ಮರಿ ಮಾಡಲು ಒಮ್ಮೆ ಮಾತ್ರ ಬಳಸುತ್ತವೆ; ಎಷ್ಟೇ ದೃಢವಾಗಿದ್ದರೂ ಮತ್ತೆ ಬಳಸಲು ಹೋಗದೆ ಗೂಡನ್ನು ಶಾಶ್ವತವಾಗಿ ತೊರೆಯುತ್ತವೆ! ಹಾಗೆ ಖಾಲಿಯಾದ ಗೂಡನ್ನು ಇತರ ಪುಟ್ಟ ಪ್ರಾಣಿಗಳು ತಮ್ಮ ವಾಸಸ್ಥಳ ಮಾಡಿಕೊಳ್ಳುತ್ತವೆ.

**ಎನ್. ವಾಸುದೇವ್**